ಉಪಾಧ್ಯಕ್ಷರು : ಅವಕಾಶ ಕೊಡುತ್ತೇನೆ, ಈಗ ಮಾನ್ಯ ಈಶ್ವರಪ್ಪನವರು ಮಾತನಾಡಿ. ಮಾನ್ಯ ಈಶ್ವರಪ್ಪನವರು ಮಾತನಾಡಿ ಎಂದು ಹೇಳಿದರೆ ಯಾರ್ಯಾರೋ ಎದ್ದು ನಿಂತುಕೊಳ್ಳುತ್ತೀರಿ.

ಶ್ರೀ ಗೋವಿಂದ ಎಂ. ಕಾರಜೋಳ : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಈಶ್ವರಪ್ಪನವರು ಈಗ ಇಲ್ಲ. ಆದ್ದರಿಂದ, ಸದರಿ ವಿಷಯವನ್ನು ನಾನು ಪ್ರಸ್ತಾಪ ಮಾಡುವುದಕ್ಕೆ ಸೂಚಿಸಿದ್ದಾರೆ.

ಉಪಾಧ್ಯಕ್ಷರು : ನಮಗೆ ಪತ್ರ ಕೊಟ್ಟಿದ್ದೀರಾ?

ಶ್ರೀ ಗೋವಿಂದ ಎಂ. ಕಾರಜೋಳ : ಈ ಪತ್ರ ಕೊಟ್ಟು ಈ ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ಹೇಳಿದ್ದಾರೆ.

ಉಪಾಧ್ಯಕ್ಷರು : ನಿಮಗೆ ಆಥರೈಜೇಷನ್ ಕೊಟ್ಟಿರುವ ಪತ್ರ ನಮಗೆ ಕೊಟ್ಟಿಲ್ಲ.

ಶ್ರೀ ಗೋವಿಂದ ಎಂ. ಕಾರಜೋಳ : ಮಾನ್ಯ ಉಪಾಧ್ಯಕ್ಷರೆ, ಇದು ಬಹಳ ಪ್ರಮುಖವಾದ ವಿಷಯವಾಗಿದೆ. ಆದ್ದರಿಂದ, ಪ್ರಸ್ತಾಪ ಮಾಡುವುದಕ್ಕೆ ದಯವಿಟ್ಟು ಅವಕಾಶಮಾಡಿಕೊಡಿ. ಐದು ನಿಮಿಷದಲ್ಲಿ ನನ್ನ ಮಾತನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು : ಮಾನ್ಯ ಮಂತ್ರಿಗಳು ಬಂದಿದ್ದಾರೆಯೇ?

(ಊ) **ವಿಷಯ : 2001ನೇ ಸಾಲಿನಲ್ಲಿ ರಾಜ್ಯದಲ್ಲಿ ಮೊದಲನೆಯ ದರ್ಜೆಯ 21 ಪಟ್ಟಣಗಳು, ಕೊಳಚೆ ಪ್ರದೇಶಗಳ ಸುಧಾರಣೆಗೆ ಹುಡ್ಕೋ ನೆರವಿನ ಯೋಜನೆಗೆ ರಾಜ್ಯ ಸರ್ಕಾರ ತನ್ನ ಪಾಲಿನ 20 ಪರ್ಸೆಂಟ್ ಹಣ ಖರ್ಚು ಮಾಡುವ ಬಗ್ಗೆ.**

ಶ್ರೀ ಗೋವಿಂದ. ಎಂ.ಕಾರಜೋಳ(ಮುಧೋಳ) : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸಚಿವರು ಇದ್ದಾರಲ್ಲಾ, ನಾನು ಐದು ನಿಮಿಷದಲ್ಲಿ ಮುಗಿಸುತ್ತೇನೆ. 2001ನೇ ಸಾಲಿನಲ್ಲಿ ಈ ರಾಜ್ಯದಲ್ಲಿ ಮೊದಲನೇ ದರ್ಜೆಯ 21 ಪಟ್ಟಣಗಳು, ಕೊಳಚೆ ಪ್ರದೇಶಗಳನ್ನು ಸುಧಾರಣೆ ಮಾಡಬೇಕೆಂದು ಹೇಳಿ ಸರ್ಕಾರ 274 ಕೋಟಿ ರೂ. ಗಳ ಒಂದು ಯೋಜನೆಯನ್ನು ಸಿದ್ಧಪಡಿಸಿ ಹುಡ್ಕೋ ನೆರವನ್ನು ಪಡೆದರು. ಅದರಲ್ಲಿ ಸರ್ಕಾರ 20 ಪರ್ಸೆಂಟ್ ಹಣ ಪ್ರತಿ ವರ್ಷ ಸರ್ಕಾರ ತನ್ನ ಪಾಲಿನಿಂದ ಖರ್ಚು ಮಾಡಬೇಕಾಗಿತ್ತು. ಆದರೆ 2001 ನೇ ಸಾಲಿನಲ್ಲಿ ಏನು 20 ಪರ್ಸೆಂಟ್ ಹಣ ವನ್ನು ಕೊಟ್ಟರು, ಅದರ ನಂತರ ಸರ್ಕಾರ ತನ್ನ ಪಾಲಿನ ಹಣ ಕೊಡದೆ ಇದ್ದುದ್ದಕ್ಕಾಗಿ ಆ ಪಟ್ಟಣ ಪ್ರದೇಶದ ಏನು ಕೊಳಚೆ ಪ್ರದೇಶಗಳು ಇವೆ, ಅವುಗಳ ಅಭಿವೃದ್ಧಿಯಾಗದೆ ಹಾಗೆಯೇ ಉಳಿದಿವೆ. ಇವತ್ತು ಸರ್ಕಾರ

ಕೊಡಬೇಕಾದ 54 ಕೋಟಿ ರೂ. ಗಳು ಇದು ಏನುದೊಡ್ಡ ಮೊತ್ತವಲ್ಲ, ಇದನ್ನು ಐದು ವರ್ಷಗಳಲ್ಲಿ ಪ್ರತಿ ವರ್ಷ 20 ಪರ್ಸೆಂಟ್ ಹಣ ಕೊಟ್ಟರೆ ಸಾಕು. ಅದಕ್ಕಾಗಿ ನಾನು ಸರ್ಕಾರದ ಗಮನವನ್ನು ಸೆಳೆಯುತ್ತಿದ್ದೇನೆ. ಮಾನ್ಯ ಸಚಿವರು ದಯಮಾಡಿ ಉತ್ತರವನ್ನು ಕೊಡಬೇಕು.

ಉಪಾಧ್ಯಕ್ಷರು : ಸಂಬಂಧಪಟ್ಟ ಮಾನ್ಯ ಸಚಿವರು ಇದ್ದಾರೆಯೇ? ಇಲ್ಲ.

ಶ್ರೀ ಎಂ.ಪಿ. ಪ್ರಕಾಶ್(ಕಂದಾಯ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ಈಗ ಮಾನ್ಯ ವಸತಿ ಸಚಿವರು ಹೊರಗಡೆ ಹೋಗಿದ್ದಾರೆ. ಆದರೆ ಇದನ್ನು ಗಮನಕ್ಕೆ ತೆಗೆದುಕೊಂಡು, ಸಾಧ್ಯವಾದರೆ ಈ ದಿವಸವೇ ಉತ್ತರವನ್ನು ಕೊಡಿಸುತ್ತೇವೆ. ಇಲ್ಲದೇ ಹೋದರೆ ಮಾನ್ಯ ಸದಸ್ಯರಿಗೆ ಉತ್ತರವನ್ನು ಕಳುಹಿಸಿಕೊಡುತ್ತೇವೆ.

ಶ್ರೀ ಗೋವಿಂದ.ಎಂ.ಕಾರಜೋಳ : ಮಾನ್ಯ ಉಪಾಧ್ಯಕ್ಷರೆ, ಉತ್ತರ ಬಂದಿದೆ, (ಉತ್ತರವನ್ನು ಲಗತ್ತಿಸಲಾಗಿದೆ): ಆದರೆ ಏನಾಗಿದೆ ಎಂದರೆ, ಬಹುಶ: ಉತ್ತರವನ್ನು ಮಾನ್ಯ ಸಚಿವರು ನೋಡಿದಂತೆ ಇಲ್ಲ. ರಾಜ್ಯ ಸರ್ಕಾರ ಹಣವನ್ನು ಒದಗಿಸಿದಲ್ಲಿ, ಕೂಡಲೇ ಟೆಂಡರ್ ಪ್ರಕ್ರಿಯೆಯನ್ನು ಪ್ರಾರಂಭ ಮಾಡುತ್ತೇವೆಂದು ಹೇಳಿದ್ದಾರೆ. ಹಾಗಾದರೆ ಈ ಉತ್ತರ ಸರ್ಕಾರದ್ದು ಹೌದೋ ಅಥವಾ ಅಲ್ಲವೋ? ದಯಮಾಡಿ ಇದನ್ನು ನಾನು ಕೇಳಬೇಕಾಗುತ್ತದೆ. ರಾಜ್ಯ ಸರ್ಕಾರ ಹಣ ಒದಗಿಸಿದಲ್ಲಿ ಅಂದರೆ ಯಾವ ರಾಜ್ಯ ಸರ್ಕಾರ. ಕಾಶ್ಮೀರದ್ದೋ ಅಥವಾ ಹಿಮಾಚಲ ಸರ್ಕಾರವೋ? ಆಂಧ್ರ ಸರ್ಕಾರವೋ? ಅಂದರೆ, ಯಾವ ಸರ್ಕಾರದವರು ನಿಮಗೆ ಹಣವನ್ನು ಕೊಡಬೇಕು.

ಶ್ರೀ ಅರಗ ಜ್ಞಾನೇಂದ್ರ : ಹಾಗಾದರೆ ಈ ಉತ್ತರವನ್ನು ಕೊಟ್ಟ ಮಂತ್ರಿಗಳು ಯಾವ ಸರ್ಕಾರದವರು?

ಶ್ರಿ ಅಂಜನಾಮೂರ್ತಿ(ವಸತಿ ಖಾತೆ ಸಚಿವರು) : ನಿರ್ಮಲ ಜ್ಯೋತಿ ಯೋಜನೆಯಡಿಯಲ್ಲಿ ರಾಜ್ಯದ 21 ಪ್ರಥಮ ದರ್ಜೆ ನಗರಗಳ ವ್ಯಾಪ್ತಿಯಲ್ಲಿನ 998 ಕೊಳಚೆ ಪ್ರದೇಶಗಳಲ್ಲಿ ಮೂಲಭೂತ ಸೌಕರ್ಯ ಉನ್ನತೀಕರಣ ಮತ್ತು ಅಭಿವೃದ್ಧಿ ಹಾಗೂ ಕೊಳಚೆ ಪ್ರದೇಶಗಳ ನಿವಾಸಿಗಳಿಗೆ ತರಬೇತಿ ಮತ್ತು ನೈಪುಣ್ಯತೆಯ ಉನ್ನತೀಕರಣದ ಕಾರ್ಯಕ್ರಮವನ್ನು ಒಟ್ಟು ರೂ.274.00 ಕೋಟಿಗಳ ವೆಚ್ಚದಲ್ಲಿ ಅನುಷ್ಠಾನಗೊಳಿಸಲು ಸರ್ಕಾರದ ಆದೇಶ ಸಂಖ್ಯೆ: ವಇ 13 ಕೊಮಂಲೇ 2000, ದಿನಾಂಕ: 14.1.2001 ರನ್ವಯ ಅನುಮೋದನೆ ನೀಡಿರುತ್ತದೆ. ಸದರೀ ಯೋಜನೆಯಡಿಯಲ್ಲಿ ಸುಮಾರು 14.93 ಲಕ್ಷ ಕೊಳಚೆ ನಿವಾಸಿಗಳು ಪ್ರಯೋಜನ ಹೊಂದಲಿದ್ದಾರೆಂದು ಅಂದಾಜು ಮಾಡಲಾಗಿದೆ. ಈ

ಯೋಜನೆಯನ್ನು ಅನುಷ್ಠಾನಗೊಳಿಸುವ ಜವಾಬ್ದಾರಿಯನ್ನು ಕರ್ನಾಟಕ ಕೊಳಚೆ ನಿರ್ಮೂಲನ ಮಂಡಳಿಗೆ ವಹಿಸಲಾಗಿದ್ದು, ಅದರನ್ವಯ ಈ ಯೋಜನೆಯ ಒಟ್ಟು ವೆಚ್ಚ 274.00 ಕೋಟಿ ರೂ.ಗಳ ಶೇಕಡ 80 ರಷ್ಟು ಹಣವನ್ನು (ರೂ.220.00 ಕೋಟಿಗಳು) ಸರ್ಕಾರದ ಖಾತರಿಯನ್ನಾಧರಿಸಿ "ಹುಡ್ಕೋ ಸಂಸ್ಥೆ" ಯಿಂದ "ಸಾಲವಾಗಿ" ಪಡೆಯಲು ಹಾಗೂ ಶೇಕಡ 20 (ರೂ 54.00 ಕೋಟಿಗಳು) ಹಣವನ್ನು ಸರ್ಕಾರದ ವಂತಿಕೆ (subsidy) ಆಗಿ ನೀಡಲು ಮತ್ತು ಸದರಿ ಯೋಜನೆಯನ್ನು 4 ವರ್ಷಗಳ ಕಾಲಾವಧಿಯೊಳಗೆ ಅನುಷ್ಠಾನಗೊಳಿಸಲು ಅನುಮೋದನೆ ನೀಡಲಾಗಿರುತ್ತದೆ. ಪ್ರತಿ ಅನುಷ್ಠಾನಾವಧಿಯ ವರ್ಷದಲ್ಲಿ ಹುಡ್ಕೋ ಸಾಲದ ಬಾಬ್ತು ರೂ.55.00 ಕೋಟಿಗಳು ಮತ್ತು ರಾಜ್ಯ ಸರ್ಕಾರದ ವಂತಿಕೆ (subsidy) ಬಾಬ್ತು ರೂ. 13.50 ಕೋಟಿಗಳು ಇರುತ್ತವೆ.

ಈ ಯೋಜನೆಯಡಿ ಪರಿಗಣಿಸಿರುವ 21 ಪ್ರಥಮ ದರ್ಜೆ ನಗರಗಳೆಂದರೆ ಹುಬ್ಬಳ್ಳಿ-ಧಾರವಾಡ, ಗುಲ್ಬರ್ಗಾ, ಬಿಜಾಪುರ, ಬೆಳಗಾಂ, ಮೈಸೂರು, ಮಂಗಳೂರು, ದಾವಣಗೆರೆ, ಶಿವಮೊಗ್ಗ, ಭದ್ರಾವತಿ, ತುಮಕೂರು, ರಾಯಚೂರು, ಹೊಸಪೇಟೆ, ಗದಗ, ಬೀದರ್, ಮಂಡ್ಯ, ಉಡುಪಿ, ಹಾಸನ, ಚಿತ್ರದುರ್ಗ, ಬಳ್ಳಾರಿ, ಕೆ.ಜಿ.ಎಫ್ ಮತ್ತು ಕೋಲಾರ.

ಈಗಾಗಲೇ ಮೊದಲನೇ ವರ್ಷದ ಅನುಷ್ಠಾನಾವಧಿಯಲ್ಲಿ 21 ಪ್ರಥಮ ದರ್ಜೆ ನಗರಗಳ 260 ಕೊಳಚೆ ಪ್ರದೇಶಗಳಲ್ಲಿ 68.20 ಕೋಟಿ ರೂ.ಗಳ ಅಂದಾಜು ವೆಚ್ಚದಲ್ಲಿ ಮೂಲಭೂತ ಸೌಕರ್ಯಗಳನ್ನೊಳಗೊಂಡ ಕಾಮಗಾರಿಗಳನ್ನು ಕೈಗೊಳ್ಳಲಾಗಿದ್ದು, ಕಾಮಗಾರಿಗಳು ಪೂರ್ಣಗೊಳ್ಳುವ ಹಂತದಲ್ಲಿರುತ್ತವೆ. ಪ್ರಥಮ ವರ್ಷದ ಯೋಜನೆಯ ಅನುಷ್ಠಾನತೆಯಿಂದ ಸುಮಾರು 3,25,454 ಕೊಳಚೆ ನಿವಾಸಿಗಳು ಕೊಳಚೆ ಪ್ರದೇಶಗಳ ಉನ್ನತೀಕರಣ ಹಾಗೂ ಅಭಿವೃದ್ಧಿಯ ಪ್ರಯೋಜನವನ್ನು ಪಡೆಯಲಿರುತ್ತಾರೆ. ಎರಡನೇ ವರ್ಷದ ಅನುಷ್ಠಾನಾವಧಿಯಲ್ಲಿ 18 ಪ್ರಥಮ ದರ್ಜೆ ನಗರಗಳ 265 ಕೊಳಚೆ ಪ್ರದೇಶಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು 66.94 ಕೋಟಿ ರೂ.ಗಳ ಅಂದಾಜಿಗೆ ಈಗಾಗಲೇ ಆಡಳಿತಾತ್ಮಕ ಅನುಮೋದನೆ ಮತ್ತು ತಾಂತ್ರಿಕ ಮಂಜೂರಾತಿ ದೊರೆತಿದ್ದು, ಟೆಂಡರ್ ಕರೆಯಲು ಎಲ್ಲಾ ಪೂರ್ವಭಾವಿ ಸಿದ್ಧತೆಗಳನ್ನು ಹಮ್ಮಿಕೊಂಡಿದ್ದು, ಸರ್ಕಾರದ ವಂತಿಕೆ (subsidy) 13.50 ಕೋಟಿ ರೂ.ಗಳನ್ನು ನಿರೀಕ್ಷಿಸಲಾಗಿದೆ. ಕೂಡಲೇ ಟೆಂಡರ್ ಪ್ರಕ್ರಿಯೆಯನ್ನು ಕೈಗೊಂಡು ಈಗಾಗಲೇ ಮಂಜೂರಾಗಿರುವ

18 ಪ್ರಥಮ ದರ್ಜೆ ನಗರಗಳ 265 ಕೊಳಚೆ ಪ್ರದೇಶಗಳಲ್ಲಿ ಉದ್ದೇಶಿತ ಕಾಮಗಾರಿಗಳನ್ನು ಕೈಗೊಂಡು ಅನುಷ್ಠಾನಗೊಳಿಸಲಾಗುವುದು.

ಉಳಿದೆರಡು ವರ್ಷಗಳ ಅನುಷ್ಠಾನಾವಧಿಯಲ್ಲಿ ಆಯಾ ಸಾಲಿನಲ್ಲಿ ಸದರಿ ಯೋಜನೆಯಡಿಯಲ್ಲಿ 473 ಕೊಳಚೆ ಪ್ರದೇಶಗಳನ್ನು ಅಭಿವೃದ್ಧಿ ಪಡಿಸಲು ನಿಗಧಿತ ಆಯವ್ಯಯದಂತೆ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಅನುಷ್ಠಾನಗೊಳಿಸಲು ಕ್ರಮ ಕೈಗೊಳ್ಳಲಾಗುವುದು.

ಶ್ರೀ ಗೋವಿಂದ ಎಂ.ಕಾರಜೋಳ : ಇದರ ಬಗ್ಗೆ ಸ್ವಲ್ಪ ನೋಡಬೇಕಾಗುತ್ತದೆ. ಈ ರೀತಿ ಸರಿಯಾಗಿ ಉತ್ತರವನ್ನು ಕೊಡದಿದ್ದರೆ ಹೇಗೆ?

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಉಪಾಧ್ಯಕ್ಷರೆ, ರಾಜ್ಯ ಸರ್ಕಾರ ಹಣವನ್ನು ಒದಗಿಸಿದ ತಕ್ಷಣವೇ ಹಣ ಕೊಡುತ್ತೇವೆ ಎನ್ನತಕ್ಕಂಥದ್ದು ತಪ್ಪು ಏನಲ್ಲ. ರಾಜ್ಯ ಸರ್ಕಾರ ಅಂದ ತಕ್ಷಣವೇ ಒಂದು ವಸತಿ ಇಲಾಖೆ ಎಂದು ಅಲ್ಲ. ಇಡೀ ರಾಜ್ಯ ಸರ್ಕಾರ, ಈ ಕಾರ್ಯಕ್ರಮಗಳಿಗೆ ಹಣವನ್ನು ಒದಗಿಸಿದ ಕೂಡಲೇ ಅಂದರೆ, ಆ ಯೋಜನೆಯನ್ನು ಒಪ್ಪಿದ್ದೇವೆ. ಈ ಒಪ್ಪಿದಂಥ ಯೋಜನೆಯ ಹಣ ಬಿಡುಗಡೆಯಾದ ಕೂಡಲೇ ಕಾರ್ಯಪ್ರವೃತ್ತರಾಗುತ್ತೇವೆಂದು ಅರ್ಥ. ಅವರು ಹಿಮಾಚಲ ಪ್ರದೇಶದವರೂ ಅಲ್ಲ, ಅವರು ಕರ್ನಾಟಕ ರಾಜ್ಯ ಸರ್ಕಾರದವರೇ ಇರುತ್ತಾರೆ.

ಶ್ರೀ ಗೋವಿಂದ ಎಂ.ಕಾರಜೋಳ : ಮಾನ್ಯ ಉಪಾಧ್ಯಕ್ಷರೆ, ತಾವು ಡಿಫೆಂಡ್ ಮಾಡಿಕೊಳ್ಳಿ ನನ್ನದೇನೂ ಅಭ್ಯಂತರವಿಲ್ಲ. ಅಟ್‌ಲೀಸ್ಟ್ ಉತ್ತರವನ್ನು ಕೊಡುವಾಗ ಸರಿಯಾಗಿ ನೋಡಿಕೊಡಬೇಕಲ್ಲವೆ? ಮಾನ್ಯ ಸಚಿವರು ಕೊಡುವ ಉತ್ತರ ಕರ್ನಾಟಕ ಸರ್ಕಾರದ ಉತ್ತರವೆಂದು ನಾವು ಭಾವಿಸುತ್ತೇವೆ. ಯಾವ ಇಲಾಖೆಯವರು, ಯಾವ ವ್ಯಕ್ತಿ ಕೊಟ್ಟರು ಎಂದು ಅಲ್ಲ. ಈ ಸದನದಲ್ಲಿ ಉತ್ತರ ಬಂತು ಎಂದರೆ, ಕರ್ನಾಟಕ ಸರ್ಕಾರದ ಉತ್ತರವೆಂದು ನಾವು ತಿಳಿದುಕೊಳ್ಳುತ್ತೇವೆ. ದಯಮಾಡಿ ಇದಕ್ಕೆ ಹಣವನ್ನು ಕೊಡಿಸುವಂಥ ಪ್ರಯತ್ನವನ್ನು ಮಾಡಿ.

ಶ್ರೀ ಅಂಜನಮೂರ್ತಿ(ವಸತಿ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ಉತ್ತರವನ್ನು ಒದಗಿಸಿದ್ದೇನೆ.

ಉಪಾಧ್ಯಕ್ಷರು : ಮಾನ್ಯ ಕಂದಾಯ ಸಚಿವರು ಉತ್ತರವನ್ನು ಕೊಟ್ಟುಬಿಟ್ಟಿದ್ದಾರೆ. ಮತ್ತೇಕೆ ತಾವು ಉತ್ತರವನ್ನು ಕೊಡುತ್ತೀರಿ, ಆಯಿತು ಬಿಡಿ.

ಅವರು ತಣ್ಣಗಾಗಿ ಇರುವಾಗ, ಮತ್ತೇಕೆ ತಾವು ಉತ್ತರವನ್ನು ಕೊಟ್ಟು ಎಬ್ಬಿಸಿಕೊಳ್ಳುತ್ತೀರಿ.

ಶ್ರೀ ಗೋವಿಂದ ಎಂ.ಕಾರಜೋಳ : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸಚಿವರ ಉತ್ತರ ಸಾಕು. ಪ್ರತಿ ವರ್ಷ 20 ಪರ್ಸೆಂಟ್‌ನಂತೆ 5 ವರ್ಷಕ್ಕೆ 54 ಕೋಟಿ ರೂ.ಗಳನ್ನು ಕೊಟ್ಟರೆ ಸಾಕು.

ಶ್ರೀ ಅಂಜನಮೂರ್ತಿ : ಮಾನ್ಯ ಉಪಾಧ್ಯಕ್ಷರೆ, ಉತ್ತರವನ್ನು ಕೊಡುತ್ತಿದ್ದೇನೆ.

ಉಪಾಧ್ಯಕ್ಷರು : ಮಾನ್ಯ ಕಾರಜೋಳರವರೆ, ಉತ್ತರ ಬೇಕೇ?

ಶ್ರೀ ಅಂಜನಾಮೂರ್ತಿ : ಉತ್ತರವನ್ನು ಈಗಾಗಲೇ ಕೊಡಲಾಗಿದೆ, ಮತ್ತೆ ಏನಾದರೂ ಬೇಕಾದರೆ ಹೇಳುತ್ತೇನೆ.

ಶ್ರೀ ಗೋವಿಂದ ಎಂ. ಕಾರಜೋಳ : ಅಭಿವೃದ್ಧಿ ಸಲುವಾಗಿ ಹಣವನ್ನು ಕೊಡುತ್ತೇವೆಂದು ಹೇಳಿದರೆ ಸಾಕು.

7. ಅಧ್ಯಕ್ಷರ ಅಪ್ಪಣೆ ಮೇರೆಗೆ

(ಅ) ವಿಷಯ: ಆಂಧ್ರಪ್ರದೇಶ ಕಾನೂನು ಬಾಹಿರವಾಗಿ ಕೃಷ್ಣಾ ಕೊಳ್ಳದ ನೀರನ್ನು ಮಂಜೂರಾತಿ ಇಲ್ಲದೆ ದುರುಪಯೋಗ ಮಾಡಿಕೊಳ್ಳುತ್ತಿರುವ ಬಗ್ಗೆ.

ಶ್ರೀ ಬಿ.ಎಸ್.ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) : ಮಾನ್ಯ ಉಪಾಧ್ಯಕ್ಷರೆ, ಬಹಳ ತೀವ್ರವಾದಂಥ ವಿಷಯ, ಈ ವಿಷಯವನ್ನು ಯಾವ ಸಮಯದಲ್ಲಿ ಚರ್ಚೆಗೆ ತೆಗೆದುಕೊಳ್ಳಬೇಕೆಂದು ಸಭಾಧ್ಯಕ್ಷರ ಕೊಠಡಿಯಲ್ಲಿ ಚರ್ಚೆ ಆಯಿತು. ಆಂಧ್ರಪ್ರದೇಶ ಕಾನೂನುಬಾಹಿರವಾಗಿ ಆ ಕೃಷ್ಣ ಕೊಳ್ಳದ ನೀರನ್ನು ಮಂಜೂರಾತಿ ಇಲ್ಲದೆ ಏನು ನೀರನ್ನು ದುರುಪಯೋಗ ಮಾಡಿಕೊಳ್ಳುತ್ತಿದೆ. ಇದಕ್ಕೆ ತಕ್ಷಣ ತಡೆಯಾಜ್ಞೆಯನ್ನು ಕೇಂದ್ರಸರ್ಕಾರ ಕೊಡಬೇಕೆಂದು ಅದರ ಹಿನ್ನೆಲೆಯಲ್ಲಿ ಚರ್ಚೆಯಾಗಿ ನಿನ್ನೆ ದಿವಸ ಉತ್ತರವನ್ನು ಕೊಟ್ಟು ಇವತ್ತು ಆ ನಿರ್ಣಯವನ್ನು ಯಾವ ರೀತಿಯಲ್ಲಿ ಸರ್ವಾನುಮತದಿಂದ ಈ ಮನೆಯಲ್ಲಿ ಕೈಗೊಳ್ಳಬೇಕು ಎನ್ನುವುದರ ಬಗ್ಗೆ ಚರ್ಚೆಯಾಗಿ ಬೆಳಿಗ್ಗೆಯಿಂದ ಕೆಲವು ಬಿಲ್‌ಗಳು ಮತ್ತು ಬೇರೆ ಬೇರೆ ಕೆಲವು ಕಲಾಪಗಳು ಇರುವುದರಿಂದ ನಾನು ಇದನ್ನು ಮುಂದೂಡಿಕೊಂಡು ಬಂದಿರುತ್ತೇನೆ. ಮಾನ್ಯ ಎಂ.ಪಿ. ಪ್ರಕಾಶ್‌ರವರು ಈ ಕಡೆ ಗಮನವನ್ನು ಕೊಟ್ಟರೆ, ಕೃಷ್ಣಾ ಕೊಳ್ಳದ ಬಗ್ಗೆ ಆಂಧ್ರಪ್ರದೇಶ ಸರ್ಕಾರ ನೀರಾವರಿ ಯೋಜನೆಯನ್ನು ಮಾಡಿ ಕಾನೂನು ಬಾಹಿರವಾಗಿ ಅದನ್ನು ದುರುಪಯೋಗ ಮಾಡಿಕೊಳ್ಳುವ ಪ್ರಯತ್ನ ಏನು ಮಾಡುತ್ತಿದೆ, ಇದು ಇಡೀ ರಾಜ್ಯದ ಜನರ ಗಮನವನ್ನು